# ಜೈನಮಹಾಕವಿಗಳಾದ ಪಂಪ-ರನ್ನರು

◆ ಸರಸ್ವತಿ ವಿಜಯನಾರಸಿಂಹ

ಅನೇಕ ಶತಮಾನಗಳಿಂದ ಜೈನಧರ್ಮ ಕರ್ನಾಟಕದಲ್ಲಿ ಪ್ರಭಾವ ಬೀರಿದೆ. ಕನ್ನಡಕ್ಕೆ ಜೈನ ಸಾಹಿತಿಗಳ ಕೊಡುಗೆ ಅನುಪಮವಾದುದು. ಕನ್ನಡನುಡಿಯ ಸಾಹಿತ್ಯಕೃಷಿ ಮಾಡಿದವರೂ, ಪದಗೊಳಿಸಿದವರೂ ಜೈನರೆಂಬುದು ನಿರ್ವಿವಾದವಾದ ವಿಷಯ. ಜೈನಧರ್ಮದ ಸಿದ್ಧಪುರುಷ 'ಅರ್ಹಂತ' ನೆನ್ನಿಸಿಕೊಳ್ಳುತ್ತಾನೆ. ಈ 'ಅರ್ಹಂತ'ನೇ ಜೈನಧರ್ಮದ ದೇವರು. ಇವನನ್ನು ಪರಮೇಷ್ಠಿ, ವೀತರಾಗ, ಪರಮಾತ್ಮ, ಜಿನ, ತೀರ್ಥಂಕರ—ಎಂದೂ ಕರೆಯುತ್ತಾರೆ. ಜೈನರಲ್ಲಿ ಮೋಕ್ಷಕ್ಕೆ ಮೂರು ಸಾಧನಗಳಿವೆ. ಇವುಗಳನ್ನೇ ರತ್ನತ್ರಯವೆನ್ನುತ್ತಾರೆ. ಮೋಕ್ಷಸಾಧನಗಳಾದ ಸಮ್ಯಕ್ ದೃಷ್ಟಿ, ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ಚಾರಿತ್ರ್ಯ—ಇವು ರತ್ನತ್ರಯಗಳು. ಅಹಿಂಸೆ, ಸತ್ಯ, ಅಸ್ತೇಯ ಮತ್ತು ಬ್ರಹ್ಮಚರ್ಯಗಳನ್ನು ಶ್ರದ್ಧೆಯಿಂದ ಆಚರಿಸುವುದೇ ಈ ಧರ್ಮದ ಸೋಪಾನ.

ಜೈನಕವಿಗಳ ವೈಶಿಷ್ಟ್ಯವೆಂದರೆ ಲೌಕಿಕ ಕಾವ್ಯಗಳೊಂದಿಗೇ ಧಾರ್ಮಿಕ ಕಾವ್ಯಗಳನ್ನೂ ಬೆಳೆಸಿಕೊಂಡು ಬಂದಿರುವುದು. ಕಾವ್ಯಗಳಲ್ಲಿ ಪಂಪನ ಆದಿಪುರಾಣವೆ ಆದಿಕಾವ್ಯವಾಗಿದೆ. 'ವಿಕ್ರಮಾರ್ಜುನ ವಿಜಯ'ದಲ್ಲಿ "ಬೆಳಗುವೆನಿಲ್ಲಿ ಲೌಕಿಕಮನ್ ಅಲ್ಲಿ ಜಿನಾಗಮಮ್" ಎಂದೂ ಆದಿಪುರಾಣದಲ್ಲಿ "ನೆಗಳ್ದಾದಿ ಪುರಾಣದೊಳರಿವುದು ಕಾವ್ಯಧರ್ಮಮಂ, ಧರ್ಮಮುಮಂ" ಎಂದೂ ಹೇಳಿಕೊಂಡಿದ್ದಾನೆ. ಕಾವ್ಯರೂಪದಲ್ಲಿ ಧರ್ಮ ಬೋಧನೆ ಆಗಬೇಕೆಂಬುದೇ ಪಂಪನ ಉದ್ದೇಶ. ಕಾವ್ಯದ ಮುಖಾಂತರ ಧರ್ಮವನ್ನು ತಿಳಿಸುವ ರೀತಿ ಅಪೂರ್ವವಾಗಿಯೂ ಮನೋಜ್ಞವಾಗಿಯೂ ಇದೆ. ಪಂಪನ ಸತ್ಸಂಪ್ರದಾಯವನ್ನೇ ಮುಂದಿನ ಕವಿಗಳು ಅನುಸರಿಸಿದ್ದಾರೆ.

## ಪಂಪ ಮಹಾಕವಿ



ಪಂಪ ಮಹಾಕವಿ

ಜನ್ಮತಃ ಜೈನನಾದರೂ ಮನೆತನದ ಪರಂಪರೆಯಿಂದ ಪಂಪ ವೈದಿಕ ಮನೋಭಾವದವನೇ ಆಗಿದ್ದನು. ಮಾಧವ ಸೋಮಯಾಜಿ ಈತನ ವಂಶದ ಮೂಲಪುರುಷ. ಒಂದು ಅಗ್ರಹಾರಕ್ಕೆ ಒಡೆಯನಾಗಿದ್ದ ಮಾಧವ ಸೋಮಯಾಜಿ ಅನೇಕ ಯಜ್ಞಯಾಗಾದಿಗಳನ್ನೂ ಮಾಡಿದ್ದನೆಂದು ತಿಳಿದುಬರುತ್ತದೆ. ಈತನ ಮಗ ಅಭಿಮಾನ ಚಂದ್ರ. ಈತ ಮಹಾದಾನಿಯೆಂದೂ ತಿಳಿದುಬರುತ್ತದೆ. ಇವನ ಮಗ ಕೊಮರಯ್ಯ. ಕೊಮರಯ್ಯನ ಮಗನೇ ಭೀಮಯ್ಯ ಅಥವಾ ಭೀಮಪಯ್ಯ—ಈತನೇ ಪಂಪನ ತಂದೆಯೆಂದು ದೃಢಪಟ್ಟಿದೆ. ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಕುರ್ಕ್ಯಾಲ ಗ್ರಾಮದಲ್ಲಿ ದೊರೆತ ಜಿನವಲ್ಲಭನ ಶಾಸನದಿಂದ ಭೀಮಪಯ್ಯ ಪಂಪನ ತಂದೆಯೆಂದು ತಿಳಿದುಬಂದಿದೆ. ಪಂಪನ ತಾಯಿಯ ತವರೂರು ನವಲಗುಂದ ತಾಲೂಕಿನ ಅಣ್ಣಿಗೇರಿ. ಈಕೆ ಸಿಂಘ ಜೋಯಿಸನ ಮೊಮ್ಮಗಳು. ಈತ ಪ್ರಕಾಂಡ ಪಂಡಿತ; ಕನ್ನಡ ತೆಲುಗು ಭಾಷೆಗಳನ್ನು ಚೆನ್ನಾಗಿ ಬಲ್ಲವನಾಗಿದ್ದನು.

ಪಂಪ ಇಂಥ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದವನಾದುದರಿಂದ ಆತನಿಗೂ ಕನ್ನಡದ ಜತೆಗೇ ತೆಲುಗು ಭಾಷೆಯಲ್ಲೂ ಪರಿಣತಿ ಇತ್ತು. ಆದರೂ ಈತನಿಗೆ ತಿಳಿಗನ್ನಡದಲ್ಲಿ ಅಸದಳ ಅಭಿಮಾನ. ಈತನ ಕಾಲ ಶಾಲಿವಾಹನ ಶಕ ೮೬೩ ಎಂದು ನಿರ್ಧರಿಸಲಾಗಿದೆ. ಈತನಿಗೆ ತಮ್ಮ ಪೂರ್ವಜರ ಬಗ್ಗೆ ಹೆಮ್ಮೆಯಿತ್ತು. ವಿಪ್ರಕುಲದಿಂದ ಜೈನಧರ್ಮಕ್ಕೆ ಮತಾಂತರ ಹೊಂದಿದ ಭೀಮಪಯ್ಯನ ಮಗ ತಾನೆಂದು ಹೇಳಿಕೊಳ್ಳುವುದರಲ್ಲಿ ಅತಿಶಯ ಹೆಮ್ಮೆ ಎಂದು ತಿಳಿಸಿದ್ದಾನೆ. ತನ್ನ ಪೂರ್ವಜರ ವರ್ಣನೆಯನ್ನೂ ಅಷ್ಟೇ ಅಭಿಮಾನದಿಂದ ಮಾಡಿದ್ದಾನೆ. ವೈದಿಕ ಸತ್ಸಂಪ್ರದಾಯದಲ್ಲಿ ಗೌರವ ಪ್ರೀತ್ಯಾದರಗಳಿದ್ದುವೆಂದೂ ತಿಳಿದುಬರುತ್ತದೆ. ಅಷ್ಟೇ ಅಭಿಮಾನದಿಂದ ತಾನು ಜೈನಧರ್ಮೀಯನೆಂದೂ ಹೇಳಿಕೊಂಡಿದ್ದಾನೆ.



ಕನ್ನಡ ಸಾಹಿತ್ಯಲೋಕದ ಸೂರ್ಯಚಂದ್ರರಂತೆ ಕಂಗೊಳಿಸುವ ಪಂಪರನ್ನರನ್ನು ಪರಿಚಯಿಸಿರುವ ಲೇಖಕಿ ದಿವಂಗತ ಖ್ಯಾತ ಚಿತ್ರಸಾಹಿತಿ ವಿಜಯನಾರಸಿಂಹ ಅವರ ಧರ್ಮಪತ್ನಿ.

ಸ್ವಾಭಿಮಾನಿ ಪಂಪನಿಗೆ ತನ್ನ ಧರ್ಮದ ಬಗ್ಗೆ ಇದ್ದಷ್ಟೇ ಅಭಿಮಾನ ತನ್ನ ವ್ಯಕ್ತಿತ್ವ ಮತ್ತು ರೂಪಿನ ಬಗ್ಗೆಯೂ ಇತ್ತು. 'ಕದಳಿಗರ್ಭಶ್ಯಾಮಂ ಮೃದುಕುಟಿಲ ಶಿರೋರುಹಂ, ಸರೋರುಹವದನಂ, ಮೃದುಮಧ್ಯತನು, ಹಿತಮಿತ ಮೃದು ವಚನಂ, ಲಲಿತ ಮಧುರ ಸುಂದರ ವೇಷಂ' ಎಂದು ತನ್ನನ್ನು ಬಣ್ಣಿಸಿಕೊಂಡಿದ್ದಾನೆ. ಈತ ಕವಿಯಷ್ಟೇ ಅಲ್ಲ ಕಲಿಯೂ ಆಗಿದ್ದ. ತನ್ನ ಧೀರಸಾಹಸವನ್ನೂ ಬಣ್ಣಿಸಿಕೊಂಡಿದ್ದಾನೆ. ಅರಿಕೇಸರಿಯ ಪರವಾಗಿ ಯುದ್ಧದಲ್ಲಿ ಹೋರಾಡಿದುದನ್ನು ಈತ ಹೇಳಿಕೊಂಡಿದ್ದಾನೆ.

ಬನವಾಸಿಯ ಪ್ರಕೃತಿ ಸೌಂದರ್ಯವನ್ನು ಈತ ತನ್ನ ಕಾವ್ಯದಲ್ಲಿ ಬಣ್ಣಿಸಿದ್ದಾನೆ. ಕನ್ನಡ ನಾಡಿನ ಬಗ್ಗೆಯೂ ಬನವಾಸಿಯ ಬಗ್ಗೆಯೂ ಈ ಕವಿಗೆ ಅಭಿಮಾನ ತುಂಬಿತ್ತು. ತನ್ನ ಆಯುಷ್ಯವನ್ನೆಲ್ಲಾ ಬನವಾಸಿಯಲ್ಲೇ ಕಳೆದನೆಂಬುದು ಈತನ ಬರಹಗಳಿಂದ ವ್ಯಕ್ತವಾಗುತ್ತದೆ.

ಪಂಪ ತನ್ನ ಗುರುಪರಂಪರೆಯನ್ನೂ ಸ್ಮರಿಸಿದ್ದಾನೆ. ಈತನ ಮೆಚ್ಚಿನಗುರು ಕೊಂಡಕುಂದಾನ್ವಯದ ದೇವೇಂದ್ರಮುನಿ. ಶ್ರವಣಬೆಳಗೊಳದ ಶಾಸನದಿಂದಲೂ ಈ ದೇವೇಂದ್ರಮುನಿ ಅತ್ಯಂತ ಪ್ರಸಿದ್ಧನಾಗಿದ್ದನೆಂಬುದು ತಿಳಿಯುತ್ತದೆ. ಪಂಪನ ವಿದ್ಯಾಭ್ಯಾಸ ಈ ಗುರುವಿನಿಂದಲೇ ಆರಂಭವಾಗಿರಬೇಕು. ಈತನೇ ಪಂಪನಿಗೆ ವೇದ, ಉಪನಿಷತ್ತುಗಳ ಪಾಠವನ್ನೂ ಹೇಳಿರಬಹುದು. ಈತನೊಂದಿಗೆ ಜಯನಂದಿ ಎಂಬ ಗುರುವನ್ನೂ ಪಂಪ ಸ್ಮರಿಸಿದ್ದಾನೆ.

ಆದಿಪುರಾಣದಲ್ಲಿ ಪಂಪನು ತಾನು ದುಂದುಭಿ ಸಂವತ್ಸರೋದ್ಭವನೆಂದು ಹೇಳಿಕೊಂಡಿದ್ದಾನೆ. ತನ್ನ ೩೯-೪೦ನೆಯ ವರ್ಷ ವಯಸ್ಸಿನಲ್ಲಿ ಈತ ಆದಿಪುರಾಣವನ್ನು ರಚಿಸಿದ್ದಾನೆ. ಈ ವೇಳೆಗೆ ಈತ ಚಾಳುಕ್ಯ ಎರಡನೆಯ ಅರಿಕೇಸರಿಯ ಆಶ್ರಯ ಪಡೆದಿದ್ದ. 'ಗುಣಾರ್ಣವ' ಎಂಬುದು ಅರಿಕೇಸರಿಯ ಬಿರುದು. ಆದಿಪುರಾಣದ ರಚನೆಯ ಸಮಯದಲ್ಲಿಯೇ ಪಂಪ ತನ್ನ ಪ್ರತಿಭೆಯಿಂದ 'ಕವಿತಾ ಗುಣಾರ್ಣವ' ಎಂಬ ಬಿರುದನ್ನು ಪಡೆದ. ಇದರಿಂದ ಪಂಪನು ರಾಜನ ಮೆಚ್ಚುಗೆಗೆ ತುಂಬಾ ಪಾತ್ರನಾಗಿದ್ದುದು ತಿಳಿಯುತ್ತದೆ. ಆದರೆ ಪಂಪನಿಗೆ ಈ ರಾಜನ ಪ್ರೀತ್ಯಾದರಗಳ ಬಗ್ಗೆ ತಿರಸ್ಕಾರವಿತ್ತು. ಈ ರಾಜಮಹಾರಾಜರು ತಮ್ಮ ಸಂತೋಷಕ್ಕಾಗಿ ವಿದ್ವಜ್ಜನರನ್ನೂ, ಕವಿಗಳನ್ನೂ ಹೇಗೆ ಬಳಸಿಕೊಳ್ಳುತ್ತಾರೆಂದೂ ತನ್ನ ಬರಹಗಳಲ್ಲಿ ತಿಳಿಸಿದ್ದಾನೆ. ವಿಕ್ರಮಾರ್ಜುನವಿಜಯದ ರಚನೆಯ ನಂತರ ಪಂಪನ ಮುಂದಿನ ಮಹಾಕಾವ್ಯದ ರಚನೆಗೂ ತನ್ನಲ್ಲಿಯೇ ಇದ್ದು ಅದಕ್ಕೆ ತಾನೇ ಎಲ್ಲ ಏರ್ಪಾಟುಗಳನ್ನೂ ಮಾಡುವುದಾಗಿಯೂ ಅರಿಕೇಸರಿ ತಿಳಿಯಹೇಳಿದ್ದ.

ರಾಷ್ಟ್ರಕೂಟ ರಾಜನ ಆಸರೆಯಲ್ಲಿ ಪಂಪ ತನ್ನ 'ಆದಿಪುರಾಣ'ದ ರಚನೆಯನ್ನು ಪೂರ್ಣ ಮಾಡಿದ. ಆದಿಪುರಾಣ ಚಂಪೂ ಶೈಲಿಯಲ್ಲಿ ರಚಿತವಾಗಿದ್ದು ಇದರಲ್ಲಿ ೧೬ ಆಶ್ವಾಸಗಳೂ ೧೫೫೫ ಪದ್ಯಗಳೂ ಇವೆ. ಇದು ಲೋಕಕಲ್ಯಾಣಕ್ಕಾಗಿ, ಧರ್ಮಾಮೃತವನ್ನು ವರ್ಷಿಸಿದ ಆದಿತೀರ್ಥೇಶ್ವರ ಚರಿತೆ, ಇದು ತನಗೆ ಪುಣ್ಯಲೋಕ ಲಭಿಸಲೆಂದು ಬರೆದುದೆಂದೂ ಹೇಳಿದ್ದಾನೆ. ಈ ಕಾವ್ಯರಚನೆಯಿಂದ ಪಂಪನು ತನಗೆ ಆತ್ಮ ಸಂತೃಪ್ತಿ ದೊರಕಿದೆಯೆಂದೂ, ಮಹಾಕವಿಯೆಂದು ಪಂಡಿತಪ್ರಶಂಸೆಯನ್ನು ತಾನು ಪಡೆದುದಾಗಿ ತಿಳಿಸಿದ್ದಾನೆ. ಜಿನಸೇನಾಚಾರ್ಯರ ಪೂರ್ವಪುರಾಣಕ್ಕೆ ಈ ಗ್ರಂಥ ಋಣಿಯೆಂದೂ ತನ್ನ ಋಣವನ್ನು ಒಪ್ಪಿಕೊಂಡು ಪಂಪ ವಿನಯವನ್ನು ಮೆರೆದಿದ್ದಾನೆ.

ಜೈನ ಧಾರ್ಮಿಕ ಗ್ರಂಥಗಳಲ್ಲಿ ಒಬ್ಬ ತೀರ್ಥಂಕರನ ಭವಾವಳಿಯಿದ್ದಂತೆ ಮತ್ತೊಬ್ಬನದು ಇರುವುದಿಲ್ಲ. ಆದರೂ ಈ ಭವಾವಳಿಯನ್ನು ನಿರೂಪಿಸುವಲ್ಲಿನ ಕವಿಪ್ರತಿಭೆಯನ್ನು ಮೆಚ್ಚಲೇಬೇಕು. ಆದಿತೀರ್ಥಂಕರನ ಭವಾವಳಿಯ ಕ್ರಮವನ್ನು ಪಂಪ ಅಮೋಘವಾಗಿ ನಿರೂಪಿಸಿದ್ದಾನೆ. ಜನ್ಮಾಂತರಗಳಲ್ಲಿ ಮೋಹಸಂಕೋಲೆಗಳು ಹೇಗೆ ಬಂಧಿಸುತ್ತವೆ, ಅವಕ್ಕೆ ಹೊಂದಿಕೊಳ್ಳಲು ಅಥವಾ ಅವುಗಳಿಂದ ಬಿಡಿಸಿಕೊಳ್ಳಲು ಜೀವ ಹೇಗೆ ಹೋರಾಡಿ ಮುಕ್ತಿ ಪಡೆಯುತ್ತದೆ ಎಂಬುದನ್ನು ವೃಷಭದೇವನ ಪೂರ್ವಜನ್ಮಾವಳಿ ಕಥನದಲ್ಲಿ ಪಂಪ ಮನೋಹರವಾಗಿ ಬಣ್ಣಿಸಿದ್ದಾನೆ. ಪಾತ್ರಗಳ ರಚನೆಯಲ್ಲಿ ವೈಶಿಷ್ಟ್ಯವಿದೆ. ಲಲಿತಾಂಗ, ವಜ್ರಜಂಘ, ಸ್ವಯಂಪ್ರಭೆ, ಶ್ರೀಮತಿಯರು ಭೋಗಜೀವನದ ಪರಾಕಾಷ್ಠೆಯನ್ನು ಮುಟ್ಟಿದ್ದರೂ ಗತಪ್ರಾಣರಾಗಲೇಬೇಕಾದ ದಾರುಣ ವರ್ಣನೆಯಿದೆ. ೧೪ನೆಯ ಮನು ನಾಭಿರಾಜನ ಪುತ್ರನಾಗಿ ಜನ್ಮವೆತ್ತಿದ ಪುರುದೇವ ಸಂಸಾರದಲ್ಲಿ ಆಸಕ್ತನಾಗಿದ್ದರೂ ಮರಣಕಾಲ ಬಂದಾಗ ಹಠಾತ್ತನೆ ನಿರಾಸಕ್ತಿಯನ್ನು ಗಳಿಸಿಕೊಂಡು ಕಣ್ಮರೆಯಾಗಿ ವೀರ ವಿರಾಗಿಯಾಗಿ ಮುಕ್ತಿ ಸಾಧಿಸಲು ತೆರಳುತ್ತಾನೆ. ಪಂಚಕಲ್ಯಾಣಗಳಲ್ಲಿ ತೀರ್ಥಂಕರರ ಜನ್ಮಾಭಿಷೇಕ ಕಲ್ಯಾಣವೂ ಭವ್ಯವಾಗಿ ನಿರೂಪಿತವಾಗಿದೆ. ಭರತಚಕ್ರವರ್ತಿ ಬಾಹುಬಲಿಗಳ ಕಥೆಯೂ ಪುರುದೇವನ ಜನ್ಮಕಥೆಗೆ ಪೂರಕವಾಗಿ ಉಜ್ವಲವಾಗಿ ಚಿತ್ರಿತವಾಗಿವೆ. ಕಾವ್ಯದ ದೃಷ್ಟಿಯಿಂದ ಪರಿಶೀಲಿಸಿದರೆ ಪಂಪನ ಧರ್ಮಶ್ರದ್ಧೆಯೂ, ಭಕ್ತಿ, ವೈರಾಗ್ಯ ಭಾವನೆಗಳೂ ಇದರಲ್ಲಿ ಅದ್ವಿತೀಯವಾಗಿ ಚಿತ್ರಣಗೊಂಡಿವೆ. ಆದಿಪುರಾಣ ಪರಮ ಪುರುಷಾರ್ಥಪ್ರದವಾಗಿ, ದರ್ಶನಪೂರ್ಣವಾಗಿದೆ. ಆಗಮವನ್ನು ಆದಿಪುರಾಣದಲ್ಲಿಯೂ ಲೌಕಿಕವನ್ನು 'ವಿಕ್ರಮಾರ್ಜುನವಿಜಯ'ದಲ್ಲಿಯೂ ಪಂಪನು ಬೆಳಗಿದ್ದಾನೆ.

'ವಿಕ್ರಮಾರ್ಜುನವಿಜಯ' ಅಥವಾ ಪಂಪ ಮಹಾಭಾರತ

೧೪ ಆಶ್ವಾಸಗಳುಳ್ಳ ಹಾಗೂ ೧೬೦೯ ಪದ್ಯಗಳುಳ್ಳ ಮಹಾಕಾವ್ಯ. ಕಾವ್ಯದ ಆರಂಭದಲ್ಲಿ ಪಂಪ ವೇದವ್ಯಾಸರನ್ನು ನೆನೆದಿದ್ದಾನೆ. ಅರಿಕೇಸರಿಯು ಬಿರುದಿತ್ತು, ಗೌರವಿಸಿ, ಇತಿಹಾಸ-ಕತೆಯನ್ನು ಬರೆಯಲು ಒಪ್ಪಿಸಿದನೆಂದೂ ಹೇಳಿಕೊಂಡಿದ್ದಾನೆ. ಅರಿಕೇಸರಿಗೂ ಅರ್ಜುನನಿಗೂ ಹೋಲಿಸಿ ಬರೆದಿರುವುದಾಗಿ ಹೇಳುತ್ತ, ತನ್ನ ಭಾರತವನ್ನು ಸಮರ್ಥಿಸಿಕೊಂಡಿದ್ದಾನೆ. ಇದನ್ನೇ 'ಸಮಸ್ತ ಭಾರತ' ವೆಂದೂ ಹೆಗ್ಗಳಿಕೆಯಿಂದ ಹೇಳಿಕೊಂಡಿದ್ದಾನೆ. ಅರಿಕೇಸರಿಯ ಸಮಕಾಲೀನ ವ್ಯಕ್ತಿಗಳ ವೃತ್ತಾಂತವನ್ನು ಇದರೊಂದಿಗೆ ಬೆರೆಸಿ ಹೇಳಿದ್ದಾನೆಂದು ಹಲವು ವಿಮರ್ಶಕರು ಹೇಳಿದ್ದಾರೆ. ಪಂಪನ ದೃಷ್ಟಿಯಲ್ಲಿ ಭಾರತ ಕೇವಲ ಕೌರವ ಪಾಂಡವರ ಕಥೆಮಾತ್ರವಲ್ಲ—ಮಹಾಪುರುಷರ ನಡವಳಿಕೆಗಳ ಮೂಲಕ ಲೋಕಧರ್ಮವನ್ನು ಬೆಳಗುವ ಮಹಾಕೃತಿ. ಶಂತನು ಸತ್ಯವತಿಯರ ಕತೆಯಿಂದ ಆರಂಭವಾಗುವ ಈ ಭಾರತದಲ್ಲಿ ಹಿಡಿಂಬವಧ, ಅರಗಿನ ಮನೆ, ದ್ರೌಪದೀ ಸ್ವಯಂವರ—ಮೊದಲಾದ ಎಲ್ಲಾ ಪರ್ವಗಳನ್ನೂ ಮೂಲಕ್ಕೆ ಕುಂದುತಾರದಂತೆ ಹೇಳಿರುವುದು ಪಂಪನ ವೈಶಿಷ್ಟ್ಯ. ಸುದೀರ್ಘವಾದ ಮಹಾಭಾರತವನ್ನು ಸಂಗ್ರಹಿಸಿ ಹೇಳುವಲ್ಲಿ ಪಂಪ ತನ್ನ ಅಗ್ಗಳಿಕೆಯನ್ನು ಮೆರೆದಿದ್ದಾನೆ. ಭೀಷ್ಮ, ದ್ರೋಣ, ದುರ್ಯೋಧನ, ಭೀಮ, ಅರ್ಜುನ, ದ್ರೌಪದಿಯರ ಪಾತ್ರಚಿತ್ರಣದಲ್ಲಿಯೂ ಕವಿ ಅದ್ವಿತೀಯನಾಗಿದ್ದಾನೆ.

**ಛಲದೊಳ್ ದುರ್ಯೋಧನಂ । ನನ್ನಿಯೊಳಿನತನಯಂ। ಗಂಡಿನೊಳ್ ಭೀಮಸೇನಂ । ಬಲದೊಳ್ ಮದ್ರೇಶನ್। ಅತ್ಯುನ್ನತಿಯೊಳ್ ಅಮರಸಿಂಧೂದ್ಭವಂ । ಚಾಪವಿದ್ಯಾ ಬಲದೊಳ್ ಕುಂಭೋದ್ಭವಂ । ಸಾಹಸದ ಮಹಿಮೆಯೊಳ್ ಫಲ್ಗುಣಂ। ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ । ಮಿಗಲಿವರ್ಗಳನೀ ಭಾರತಂ ಲೋಕಪೂಜ್ಯಂ ॥**

ಎಂಬ ಪಂಪನ ಉಪಸಂಹಾರ ವಾಕ್ಯದಿಂದ ಕವಿಯ ಸದಾಶಯ ವ್ಯಕ್ತವಾಗುತ್ತದೆ. ಕರ್ಣ, ದುರ್ಯೋಧನರ ಮೈತ್ರಿಯ ಚಿತ್ರಣದಲ್ಲಿಯೂ ಕವಿ ಅಸಮಾನನಾಗಿ ನಿಲ್ಲುತ್ತಾನೆ. ಕರ್ಣನ ಸಾವಿನ ಚಿತ್ರಣದಲ್ಲಿಯೂ ಕವಿ ತಾನು ಕಣ್ಣೀರು ಗರೆದಂತೆ ಓದುಗರನ್ನೂ ಕಣ್ಣೀರ್ಗರೆಸುತ್ತಾನೆ. ಅಭಿಮಾನಾಂಧನಾದ ದುರ್ಯೋಧನನ ಅವಸಾನವನ್ನೂ ಮನಮಿಡಿಯುವಂತೆ ಚಿತ್ರಿಸಿದ್ದಾನೆ ಕವಿ. ಈ ಸಾವು ನೋವಿನ ಚರಮಗೀತೆಯನ್ನು ಬರೆಯುತ್ತಾ ಕವಿ ಕರ್ಣನನ್ನು ನೆನೆದು **'ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆ'** ಎಂದು ಕಂಬನಿದುಂಬಿ ನುಡಿಯುತ್ತಾನೆ.

ಪಂಪನದು ಔಚಿತ್ಯ ಮೀರದ ಪ್ರಸನ್ನ ಗಂಭೀರ ಶೈಲಿ. ಅಕ್ಷರಶಕ್ತಿ, ಶಬ್ದಶಕ್ತಿ, ಅರ್ಥಶಕ್ತಿಗಳನ್ನು ಧ್ವನಿಸಿದ್ಧಿಗಾಗಿ ಬಳಸಿಕೊಳ್ಳುವ ಕೌಶಲ, ನಾಟಕೀಯಪ್ರಜ್ಞೆ ಮೊದಲಾದ ಕಾವ್ಯಗುಣಗಳನ್ನು ಹೊಮ್ಮಿಸಬಲ್ಲ ಪಂಪನ ಪ್ರತಿಭೆ ಆತನನ್ನು ಕವಿಗಳಲ್ಲೇ ಮಹಾಕವಿಯನ್ನಾಗಿಸಿವೆ. ಈ ಕಾವ್ಯ ವೀರರಸ ಪ್ರಧಾನವಾಗಿದೆ. ಯುದ್ಧವರ್ಣನೆಗಳು ಕವಿಯ ಲೋಕಾನುಭವಕ್ಕೆ ದ್ಯೋತಕವಾಗಿವೆ.

ಪಂಪನ ಕಾವ್ಯಗಳಲ್ಲಿ ಸಂಸ್ಕೃತ ಮಹಾಕವಿಗಳ ಪ್ರಭಾವ ಕಾಣಬರುತ್ತದೆ. ಕನ್ನಡದ ಕುಮಾರವ್ಯಾಸಭಾರತದಲ್ಲಿ ಪಂಪನ ಜಾಡನ್ನೇ ಕಾಣುತ್ತೇವೆ. ಕನ್ನಡದ ಇನ್ನೂ ಇತರ ಮಹಾಕವಿಗಳು ಪಂಪನ ಪ್ರಭಾವಕ್ಕೆ ಒಳಪಟ್ಟಿದ್ದಾರೆ. ಪಂಪನ ಪ್ರಭಾವದ ವ್ಯಾಪಕತ್ವಕ್ಕೆ ಇದು ನಿದರ್ಶನ. ಆದ್ದರಿಂದಲೇ ಪಂಪ ಕನ್ನಡದ ಕವಿಕುಲಗುರು ಎಂಬ ಪ್ರಶಸ್ತಿಗೆ ಪಾತ್ರನಾಗಿದ್ದಾನೆ.

## ಮಹಾಕವಿ ರನ್ನ



ಬಿಜಾಪುರ ಜಿಲ್ಲೆಯ ಮುಧೋಳ ಈತನ ಜನ್ಮಸ್ಥಳ. ಬಳೆಗಾರ ವೃತ್ತಿಯ ಜೈನಮತದ ಜಿನವಲ್ಲಭ ಈತನ ತಂದೆ. ತಾಯಿ ಅಬ್ಬಲಬ್ಬೆ. ರೇಚಣ್ಣ, ದೃಢಬಾಹು ಮತ್ತು ಮಾರಮಯ್ಯ ಈತನ ಅಣ್ಣಂದಿರು. ರನ್ನನಿಗೆ ತನ್ನ ಹುಟ್ಟೂರಲ್ಲಿ ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲವಿರಲಿಲ್ಲ. ಈತ ವಿದ್ಯಾಗುರುವನ್ನರಸುತ್ತಾ ಗಂಗ ಮಂಡಲಕ್ಕೆ ಬಂದ. ಅಲ್ಲಿ ಈತನಿಗೆ ಚಾವುಂಡರಾಯನ ಆಶ್ರಯ ದೊರಕಿತು. ಈತ ೯೪೯ರಲ್ಲಿ ಜನಿಸಿದವನೆಂದು ತಿಳಿದುಬರುತ್ತದೆ. ಚಾವುಂಡರಾಯ ತನಗಿಂತ ಕಿರಿಯನಾದ ರನ್ನನಿಗೆ ಬೇಕಾದ ವಿದ್ಯಾಗುರುವನ್ನು ತೋರಿಸಿಕೊಟ್ಟುದಲ್ಲದೆ ಅವನ ವ್ಯಾಸಂಗಕ್ಕೆ ಹೆಚ್ಚು ಪ್ರೋತ್ಸಾಹವನ್ನೂ ಸೌಕರ್ಯವನ್ನೂ ಕಲ್ಪಿಸಿಕೊಟ್ಟ. ಗಂಗರಾಜ್ಯದ ಮಂತ್ರಿಯೂ ವಿದ್ಯಾಪೋಷಕನೂ ಆಗಿದ್ದ ಚಾವುಂಡರಾಯನ ಪ್ರಭಾವದಿಂದ ಅಜಿತಸೇನಾಚಾರ್ಯರಂಥ ಗುರುಗಳ ಶಿಷ್ಯತ್ವ ಪಡೆದು ರನ್ನ ಧಾರ್ಮಿಕ

ವಾಗಿಯೂ ಲೌಕಿಕವಾಗಿಯೂ ವಿದ್ಯಾಭ್ಯಾಸದಲ್ಲಿ ಪರಿಣತಿ ಪಡೆದ. ಕನ್ನಡ, ಸಂಸ್ಕೃತ ಭಾಷೆಗಳ ಸಾಹಿತ್ಯದ ಅಧ್ಯಯನ ನಡೆಸಿದ. ದೇಶಾದ್ಯಂತ ಪರ್ಯಟನೆ ನಡೆಸಿ ವೈವಿಧ್ಯಮಯ ಅನುಭವದೊಂದಿಗೆ ಹುಟ್ಟೂರಿಗೆ ಮರಳಿದ.

ರನ್ನನಲ್ಲಿದ್ದ ಕಾವ್ಯಶಕ್ತಿ ಅನಂತರ ಪ್ರಸ್ಫುಟಿಸಿತು. ತನ್ನ ವಾಗ್ವೈಖರಿಯಲ್ಲಿ ರನ್ನನಿಗೆ ಪೂರ್ಣವಿಶ್ವಾಸವಿತ್ತು. 'ಜಿನಸಮಯ ದೀಪಕ' ನೆಂದು ತನ್ನನ್ನು ತಾನು ಹೊಗಳಿಕೊಂಡಿದ್ದಾನೆ.

**'ಆರಾತೀಯ ಕವೀಶ್ವರಾರುಂ ಮುನ್ನಾರ್ತರಿಲ್ಲ।**
**ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ ಸಾರಸ್ವತ**
**ಮೆನಿಪ ಕವಿತೆಯೊಳ್ ಕವಿರನ್ನಂ'**

ಎಂದು ರನ್ನ ಅದ್ವಿತೀಯ ಸ್ವಾಭಿಮಾನದಿಂದ ತನ್ನ ಕಾವ್ಯ ಸೃಷ್ಟಿಯನ್ನು ಮೆಚ್ಚಿಕೊಂಡಿದ್ದಾನೆ. 'ಸಾಹಸಭೀಮವಿಜಯ'— ರನ್ನನ ಗದಾಯುದ್ಧ ಎಂಬ ಹೆಸರುಳ್ಳ ಮಹಾಕಾವ್ಯ. ಇದರಲ್ಲಿ ೧೦ ಆಶ್ವಾಸಗಳಿವೆ. ಈ ಕಾವ್ಯರಚನೆಯ ಕಾಲ ೯೮೦ರ ಸುಮಾರಿನಲ್ಲಿ ಎಂದು ಹೇಳಲಾಗುತ್ತದೆ. ಮಹಾಕವಿ ಭಾಸನ 'ಊರುಭಂಗ'ದ ಹಾಗೂ ಪಂಪನ 'ವಿಕ್ರಮಾರ್ಜುನ ವಿಜಯ'ದ ಪ್ರಭಾವ ರನ್ನನ ಕಾವ್ಯರಚನೆಯಲ್ಲಿ ಕಂಡು ಬಂದರೂ ಈತ ತನ್ನ ಆತ್ಮಪ್ರಶಂಸೆ ಮಾಡಿಕೊಂಡಂತೆ ವಾಗ್ವೈಖರಿಯಲ್ಲಿ ಅದ್ವಿತೀಯನಾಗಿ ಮೆರೆಯುತ್ತಾನೆ. ತಾನು ಆಶ್ರಯಪಡೆದ ರಾಜ್ಯದಲ್ಲಿ ಮೆರೆಯುತ್ತಿದ್ದ ಯುವರಾಜನ ಸಾಹಸವನ್ನು ಬಣ್ಣಿಸುವ ಈ ಗದಾಯುದ್ಧವು ಅಂದಿನ ಸಾಮಾಜಿಕ ಪರಿಸ್ಥಿತಿಗೆ ಕನ್ನಡಿಯಾಗಿದೆ. ದ್ರೌಪದಿ ಈ ಕಾವ್ಯದ ನಾಯಕಿ. ಇದರಲ್ಲಿ ಭೀಮನೊಬ್ಬನೆ ಆಕೆಯ ಪತಿ. ಪಂಚ ಪಾಂಡವರ ಬಗ್ಗೆ ಇಲ್ಲಿ ಹೇಳಿಲ್ಲ. ಕೌರವರೆಲ್ಲ ಅಳಿದು ದುರ್ಯೋಧನನೊಬ್ಬನೆ ಉಳಿದಿರುತ್ತಾನೆ. ಆ ಸಮಯದಲ್ಲಿ ಮತ್ತೆ ಸಂಧಿಯ ಪ್ರಸ್ತಾಪವಾಗುತ್ತದೆ. ಸಂಧಿಯಾದರೆ ತನ್ನ ಪ್ರತಿಜ್ಞೆ ಈಡೇರದೆಂದು ಅಂಜಿದ ದ್ರೌಪದಿ ಭೀಮನನ್ನು ಪ್ರಚೋದಿಸಿ ಗದಾಯುದ್ಧಕ್ಕೆ ಹುರಿದುಂಬಿಸುತ್ತಾಳೆ. ದ್ರೌಪದಿಯ ಪಾತ್ರ ಪರಿಣಾಮಕಾರಿಯಾಗಿದೆ. ೧೦ ಆಶ್ವಾಸಗಳಲ್ಲಿಯೂ ಭೀಮನ ಧೀರೋದಾತ್ತತೆಯ ಚಿತ್ರಣವಿದೆ. ವೀರ, ಕರುಣ, ಹಾಸ್ಯ ರಸಾನುಭವಗಳು ಈ ಕಾವ್ಯದ ಓದುಗರಿಗೆ ಸುಲಭ ಸಾಧ್ಯವಾಗಿದೆ. ದುರ್ಯೋಧನನ ಅವಸಾನದ ಚಿತ್ರಣ ಕರುಳನ್ನು ಹಿಂಡುತ್ತದೆ. ಭೀಮಸೇನನ ಶೌರ್ಯವನ್ನು ಬಣ್ಣಿಸು ವಲ್ಲಿ ಕವಿ ಯಶಸ್ವಿಯಾಗಿದ್ದಾನೆ. ವೀರಾಧಿವೀರ ಭೀಮಸೇನನ ಪಟ್ಟಾಭಿಷೇಕದಲ್ಲಿ ಈ ಕಾವ್ಯ ಕೊನೆಗೊಳ್ಳುತ್ತದೆ. ಭೀಮ ವಿಜಯದ ಈ ಕಾವ್ಯ ಮಹಾಕಾವ್ಯವೆಂಬುದರಲ್ಲಿ ಬೇರೆ ಮಾತಿಲ್ಲ.

ರನ್ನನ ಮತ್ತೊಂದು ಕೃತಿ ಅಜಿತ ಪುರಾಣ. ಪ್ರೌಢ ಚಂಪೂ ಶೈಲಿಯಲ್ಲಿ ಈ ಕಾವ್ಯ ರಚಿತವಾಗಿದೆ. ೯ರಿಂದ ೧೧ರವರೆಗಿನ ಸರ್ಗಗಳಲ್ಲಿ ಸಗರನ ಚರಿತ್ರೆ ನಿರೂಪಿತವಾಗಿದೆ. ಪುರಾಣತಿಲಕ, ಪುರಾಣ ಚೂಡಾಮಣಿ—ಎಂದೂ ಕವಿ ಇದನ್ನು ಹೊಗಳಿಕೊಂಡಿದ್ದಾನೆ. ಇದರಲ್ಲಿ ಅಜಿತಸ್ವಾಮಿ ಸಂಸಾರತ್ಯಾಗಿಯಾಗುವ ಸನ್ನಿವೇಶ ಮನಮಿಡಿಸುತ್ತದೆ. ಇದರಲ್ಲಿನ ವೈರಾಗ್ಯ ನಿರೂಪಣೆ ವಿಶ್ವಧರ್ಮದ ಮಹೋನ್ನತಿ ಯನ್ನು ಮುಟ್ಟಿದೆ. ರನ್ನನ ಮಹಾಕೃತಿ ಗದಾಯುದ್ಧ ಕನ್ನಡ ಸಾಹಿತ್ಯಲೋಕದ ಸಂಪತ್ತು. ಚಕ್ರೇಶ್ವರ ಚರಿತ್ರೆ, ಪರಶುರಾಮ ಚರಿತ್ರೆ—ರನ್ನನ ರಚನೆಗಳು ಎಂದು ಹೇಳುತ್ತಾರೆ. ಆದರೆ ಆ ಕಾವ್ಯಗಳು ದೊರೆತಿಲ್ಲ. ರನ್ನಕಂದ ಎಂಬ ಒಂದು ನಿಘಂಟೊಂದನ್ನು ಈತ ಬರೆದಿದ್ದಾನೆ.

ಕನ್ನಡದ ಸಾಹಿತ್ಯಪ್ರಪಂಚಕ್ಕೆ ಜೀವನೀಡಿ ಪೋಷಿಸಿದ ಈ ಇಬ್ಬರು ಮಹಾಕವಿಗಳ ಜೀವನವನ್ನು ಅಧ್ಯಯನ ಮಾಡಿದರೆ ಆಧುನಿಕ ಪೀಳಿಗೆಯೂ ಕೂಡ ಅನೇಕ ಉದಾತ್ತ ವಿಚಾರ ಗಳನ್ನು ಇವರಿಂದ ತಿಳಿಯಬಹುದು. ಮೌಲ್ಯಗಳ ಪ್ರತಿಬಿಂಬ ವಿಲ್ಲದೆ ಉತ್ತಮ ಕಾವ್ಯ ಅಸಾಧ್ಯವಾದ್ದರಿಂದ ಈ ಮೌಲ್ಯ ಗಳನ್ನು ಇಂದಿಗೂ ಸಮಾಜದಲ್ಲಿ ಕಾಣುವಂತಾದರೆ ಸಾಹಿತ್ಯ ಕ್ಷೇತ್ರದಲ್ಲೂ ಉತ್ತಮಿಕೆ ಸಾಧ್ಯವಾಗುತ್ತದೆ. *

## ಜೈನಧರ್ಮದ ಹಿರಿಮೆ

ಜೈನದರ್ಶನವು ಅವೈದಿಕ ದರ್ಶನವಾದರೂ (ವೇದಗಳ ಪಾರಮ್ಯವನ್ನು ಒಪ್ಪದ ಧರ್ಮಗಳು ಅವೈದಿಕ. ಉದಾ: ಬೌದ್ಧಧರ್ಮ, ಚಾರ್ವಾಕ ದರ್ಶನ) ಅದು ಭೌತವಾದವಲ್ಲ. ಜೈನಧರ್ಮದ ಒಂದು ವೈಶಿಷ್ಟ್ಯವೆಂದರೆ ಎಲ್ಲ ಧರ್ಮಗಳಲ್ಲೂ ಸತ್ಯಾಂಶವಿದೆ ಎಂದು ಅದು ಸಾರುತ್ತದೆ. ಸತ್ಯ ಏಕಮುಖವಾದದ್ದಲ್ಲ. ಒಂದೊಂದು ಧರ್ಮವೂ ಸತ್ಯದ ಒಂದೊಂದು ಮುಖವನ್ನು ಮಾತ್ರ ತೋರಿಸುವುದು. ಇವುಗಳೆಲ್ಲದರ ಮೊತ್ತವೇ ಸತ್ಯ. ಜೀವರುಗಳು ಬಿಡುಗಡೆಗೆ ಅಗತ್ಯವಾದ ಸಮ್ಯಕ್‌ಜ್ಞಾನ, ಸದ್ದರ್ಶನ, ಸತ್ ಶೀಲಗಳೆಂಬ ಗುಣಗಳನ್ನು ರೂಢಿಸಿಕೊಂಡು ಮೋಕ್ಷ ಪಡೆದುಕೊಳ್ಳಬೇಕು. ಕಡೆಯ ತೀರ್ಥಂಕರನಾದ ಮಹಾವೀರನ (ಕ್ರಿ.ಪೂ. ೫೯೯-೫೨೭) ಪ್ರಭಾವದಿಂದ ಜೈನಧರ್ಮ ಪ್ರಸಿದ್ಧವಾಯಿತು. ಎಪ್ಪತ್ತೈದು ವರ್ಷಗಳ ಕಾಲ ಜೀವಿಸಿದ ಮಹಾವೀರ ಪರಿವ್ರಾಜಕನಾಗಿ ದೇಶಪರ್ಯಟನ ಮಾಡುತ್ತಾ ಜೈನಧರ್ಮವನ್ನು ಬೋಧಿಸಿದನು. ಮಹಾವೀರನ ಅನುಯಾಯಿಗಳಲ್ಲಿ ದಿಗಂಬರ ಮತ್ತು ಶ್ವೇತಾಂಬರ ಎಂಬ ಎರಡು ಪಂಗಡಗಳು ಹುಟ್ಟಿಕೊಂಡವು. ದಿಗಂಬರರು ಬೆತ್ತಲೆಯ ಜೀವನವನ್ನು ಅನುಸರಿಸುತ್ತಾರೆ; ಆಜನ್ಮ ಬ್ರಹ್ಮಚರ್ಯವನ್ನು ಪಾಲಿಸುತ್ತಾರೆ. ಜೈನಧರ್ಮದಲ್ಲಿ ಅಹಿಂಸೆಗೆ ಅತ್ಯಂತ ಹೆಚ್ಚಿನ ಮಹತ್ವ. 'ಅಹಿಂಸೆಯೇ ಪರಮಧರ್ಮ', 'ಜೀವದಯೆಯೇ ಜಿನಧರ್ಮಂ' ಎಂದು ಜೈನಧರ್ಮ ಸಾರುತ್ತದೆ. *